ಶ್ರೀ ಆಲೂರು ಹನುಮಂತಪ್ಪ.—ನತ್ಯಮಂಗಲ ಟ್ಯಾಂಕ್ ರೆಸ್ಟೊರೇಷನ್ ಕೆಲಸ ನುಮಾರು 59,700 ರೂಪಾಯಿಗಳು ಮತ್ತು ಅರೇಗುಜ್ಜನಹಳ್ಳಿ ಟ್ಯಾಂಕ್ ರೆಸ್ಟೊರೇಷನ್ ಕೆಲಸ ಸಮಾರು 9,000 ಎನ್ನುವುದು.

ಶ್ರೀ ಕೆ. ಲಕ್ಕಪ್ಪ.—ನಮ್ಮ ಹಣಕಾಸಿನ ನಚಿವರು, ಮರಾಮತ್ತು ಶಾಖಾ ನಚಿವರು ಹಾಗೂ ಗೃಹ ನಚಿವರು ನಮ್ಮ ತುಮಕೂರು ಜಿಲ್ಲೆಗೆ ಬಂದು ಇಲ್ಲ ಅಭಾವಕ್ಕೆ ಒಳಗಾಗಿರುವ ಪ್ರದೇಶ ಗಳಾವುವು ಎನ್ನುವುದನ್ನೆರ್ಲಾ ಪರಿಶೀಲನೆ ಮಾಡಿ ಒಂದು ಪಟ್ಟಿಯನ್ನು ತಯಾರು ಮಾಡಿಕೊಂಡು ನರಕಾರಕ್ಕೆ ಒದಗಿಸಿ ಇಲ್ಲಗೆ ಬೇಕಾಗುವ ಇರಿಗೇಷನ್ನು ಯೋಜನೆಗಳನ್ನೆರ್ಲಾ ಮಂಜೂರು ಮಾಡುತ್ತೇವೆಂದು ಭರವಸೆ ಹೇಳಿ ಬಂದಿದ್ದರೂ ಕೂಡ ಇಲ್ಲ ಮಾನ್ಯ ಉಪಮಂತ್ರಿಗಳು ಉತ್ತರ ಕೊಡುವಾಗ ಪದೇ ಪದೇ ಯಾವ ಕೆಲಸಗಳನ್ನೂ ತೆಗೆದುಕೊಂಡು ಇಲ್ಲ ಎನ್ನುವುದು ನರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ನದಸ್ಯರು ನರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಇತ್ತೀಚೆಗೆ ಮಾನ್ಯ ಹಣಕಾಸಿನ ನಚಿವರು, ಮರಾಮತ್ತು ನಚಿವರು ಹಾಗೂ ಗೃಹ ನಚಿವರು ಪ್ರವಾಸ ಮಾಡಿಕೊಂಡು ತುಮಕೂರಿನಿಂದ ಬಂದ ಮೇಲೆ ಈ ತಾಲ್ಲೂಕಿಗೆ ನಂಬಂಧಪಟ್ಟ ಕೆಲಸಗಳನ್ನೆರ್ಲಾ ಪರಿಶೀಲನೆ ಮಾಡಿ ನುಮಾರು 19 ಲಕ್ಷ ರೂಪಾಯಿಗಳ ಹೊಸ ಕೆಲಸಗಳನ್ನೂ ಈಗಾಗಲೇ ಮಾಡಲು ನರಕಾರ ಮಂಜೂರಾತಿ ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ತಾಲ್ಲೂಕಿನಲ್ಲಿ ಬರೀ ವಿರೋಧಪಕ್ಷದ ನದಸ್ಯರುಗಳೇ ಇಲ್ಲಗೆ ನದಸ್ಯರಾಗಿ ಆರಿಸಿ ಬಂದಿರುವುದರಿಂದ ನಮ್ಮ ತುಮಕೂರು ಜಿಲ್ಲೆಯ ಕೆಲಸಗಳೆಲ್ಲಾ ನ್ಥಗಿತವಾಗುತ್ತಿದೆ ಎನ್ನುವುದು ನರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ನರಕಾರಕ್ಕೆ ಅಂತಹ ಯಾವ ಭಾವನೆಯೂ ಇಲ್ಲ. ಇದು ಮಾನ್ಯ ನದಸ್ಯರ ತಪ್ಪು ಕಲ್ಪನೆ ಎಂದು ನಾನು ಹೇಳುತ್ತೇನೆ.

ಶ್ರೀಮತಿ ಜಿ. ನಿ. ಭಾಗೀರಥಮ್ಮ.—ಈಗ ಉಳಿದಿರುವ ಕೆಲಸ ಕಾರ್ಯಗಳನ್ನು ಪೂರ್ತಿ ಮಾಡಲು ಇನ್ನೂ ನಿಧಾನವಾಗುತ್ತಿದೆ. ಇಷ್ಟು ತಡವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಅನೇಕ ಕಡೆಗಳಲ್ಲ ಅಕ್ಸಿಸಿಷನ್ನು ಕೇಸುಗಳಿವೆ ಮತ್ತೆ ಕೆಲವು ಕಡೆಗಳಲ್ಲಿ ಕಂಟ್ರಾಕ್ಟರುಗಳ ಅಭಾವದಿಂದಾಗಿ ನಿಧಾನವಾಗುತ್ತಿದೆ. ಈಗ ಅದಷ್ಟು ತ್ವರಿತವಾಗಿ ಇಲ್ಲನ ಕೆಲಸಗಳನ್ನು ಮಾಡುತ್ತಿದ್ದೇವೆ. ಈಗಾಗಲೇ ಕೆಲವು ಕೆಲಸಗಳು ಮುಗಿದಿವೆ. ಹೊಸ ಕೆಲಸ ಗಳಿಗೆಂದು ನುಮಾರು 4·54 ಲಕ್ಷದಷ್ಟು ಹಣ ಕೂಡ ಒದಗಿನರಾಗಿದೆ.

Channelising irrigation loans through other Land Development Banks.

*Q.—371. Sri P. VENKATAGIRIYAPPA (Kolar).—

Will the Government be pleased to state :—

(*a*) whether Government have taken a decision to channelise all irrigation and other Development loans through Land Development Co-operative Bank ;

(*b*) if so, what is the action taken so far in the matter ?

*A.—Sri K. PUTTASWAMY (Minister for Co-operation and Housing).—

(*a*) Government have decided to channelise all irrigation loans through Land Development Banks.

(SRI . PUTTASWAMY)

(*b*) 4,000 wells have been allotted for the State. Divisionwise, Districtwise distribution is made. Applications are being built up and loans have been already sanctioned in 323 cases to the tune of Rs. 12,49,930. First instalment of the loan has been disbursed in 294 cases involving a sum of Rs. 3,44,675.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗಾಗಿ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕುಗಳಿಗಾಗಿ ಹಣವನ್ನು ಯಾವ ಆಧಾರದ ಮೇಲೆ ಒದಗಿಸುತ್ತಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅಲ್ಲಿನ ಅವಶ್ಯಕತೆಗಳಿಗನುಸಾರವಾಗಿ ನೋಡಿ ಡೆಪ್ಯೂಟಿ ಕಮೀಷನರವರು ಹಂಚುತ್ತಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗಾಗಿ ಸಾಲಗಳನ್ನು ಹಂಚುವಾಗ ಜಿಲ್ಲಾವ್ಯೆನು ಹಂಚುತ್ತಾರೆ. ಆದರೆ ಕೆಲವು ಜಿಲ್ಲೆಗಳಲ್ಲಿ ಕೊಟ್ಟ ಹಣ ಹಂಚವೇ ಹಾಗೇ ಲ್ಯಾಪ್ಸ್ ಆಗುತ್ತಿದೆ. ಅಂತಹ ಹಣವನ್ನು ಇತರ ಕಡೆಗಳಲ್ಲಿ ಅವಶ್ಯಕತೆಗಳು ಹೆಚ್ಚಾಗಿರುವ ಬಾವಿಗಳಿಗಾಗಿ ಹಂಚುವುದರ ಕಡೆಗೆ ಸರಕಾರ ಏತಕ್ಕೆ ಯೋಚನೆ ಮಾಡಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

1-00 P. M.

ಶ್ರೀ ಪಿ. ವೆಂಕಟಗಿರಿಯಪ್ಪ.—ಸೆಂಟ್ರಲ್ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕು ಮುಂಜೂರು ಮಾಡಿ ರಿಕಾರ್ಡ್ ಕಳಿಸಿದರೆ ಅದನ್ನು ಇಷ್ಟು ಕಾಲದೊಳಗಾಗಿ ವಾಪಸು ಕಳಿಸಬೇಕೆಂದೇನಾದರೂ ಕಾಲ ನಿಗದಿಮಾಡಲಾಗಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಹಳೇ ಮಾತು. ಈಗ ಅರ್ಜಿ ಕೊಟ್ಟ ಎರಡು ತಿಂಗಳೊಳಗಾಗಿ ಸಾಲ ಕೊಡುವ ವ್ಯವಸ್ಥೆ ಮಾಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅರ್ಜಿಯನ್ನು ಸ್ಥಳದ ಬ್ಯಾಂಕಿನವರು ಶಿಫಾರ್ಸುಮಾಡಿದ್ದಕ್ಕೆ ಮುಖ್ಯವಾಗಿ ಗಮನಕೊಡುತ್ತೀರೋ ಅಥವ ಜಿಲ್ಲಾಧಿಕಾರಿಗಳ ಶಿಫಾರ್ಸಿಗೆ ಗಮನಕೊಡುತ್ತೀರೋ ?

ಶ್ರೀ ಕೆ. ಪುಟ್ಟಸ್ವಾಮಿ.—ತಾತ್ಕಾಲಿಕವಾಗಿ ಜಿಲ್ಲಾಧಿಕಾರಿಗಳು ಯಾರಿಗೆ ಸಾಲ ಕೊಡಬೇಕೆಂದು ಶಿಫಾರ್ಸುಮಾಡುತ್ತಾರೋ ಅದಕ್ಕೆ ಪ್ರಾಶಸ್ತ್ಯ ಕೊಡಲಾಗುತ್ತಿದೆ. ಕಾರಣ ಈ ಯೋಜನೆಯನ್ನು ನವೆಂಬರ್ ತಿಂಗಳಿನಲ್ಲಿ ಅಭಿವೃದ್ಧಿ ಬ್ಯಾಂಕಿಗೆ ವಹಿಸಲಾಯ್ತು. ಅದುವರೆಗೆ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಪ್ರಕಾರ ಕೆಲವು ಅರ್ಜಿಗಳು ಬಂದಿದ್ದುವು. ಆ ಅರ್ಜಿದಾರರಿಗೆ ತೊಂದರೆ ಆಗಬಾರದೆಂದು ಜಿಲ್ಲಾಧಿಕಾರಿಗಳೇ ಪರಿಶೀಲಿಸಿ ಜಮೀನು ಅಭಿವೃದ್ಧಿ ಬ್ಯಾಂಕಿಗೆ ಕಳುಹಿಸುವಂತೆ ತಿಳಿಸಲಾಗಿದೆ.

ಶ್ರೀ ಬಿ. ಗೌರಪ್ಪಾಜಿ.—ಈಗ ತಾಲ್ಲೂಕು ಬೋರ್ಡಿನವರು, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಮತ್ತು ಜಿಲ್ಲಾಧಿಕಾರಿಗಳು—ಹೀಗೆ ಮೂರು ಕಡೆಗಳಲ್ಲಿ ಸಾಲ ಮುಂಜೂರು ಮಾಡುವ ಬಗ್ಗೆ ಲಸ್ಟ್ ಮಾಡುವ ವ್ಯವಸ್ಥೆ ಇರುವುದರಿಂದ ತೊಂದರೆಯಾಗಿದೆ. ಎಲ್ಲದೆ ಒಂದು ರೂಪಾಯಿ ಕಂದಾಯವಿದ್ದರೆ 300 ರೂಪಾಯಿಗಳನ್ನು ಸಾಲ ಕೊಡುತ್ತಿದ್ದಾರೆ. ಇದರಿಂದ 10 ಎಕರೆಯೊಳಗೆ ಜಮೀನಿರುವವರಿಗೆ ಸಿಗದೆ ತೊಂದರೆಯಾಗಿದೆ. ಆದುದರಿಂದ ಕಡಮೆ ಜಮೀನಿರುವವರಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ 1 : 300 ಎಂದಿರುವುದನ್ನು ತಪ್ಪಿಸಿ ಬಡವರಿಗೆ ಸಾಲ ದೊರೆಯುವಂತೆ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು 2—3 ಪ್ರಶ್ನೆ ಹಾಕಿದರು, ಉತ್ತರ ಕೊಡುತ್ತೇನೆ. ಎಲ್ಲೋ ಒಂದರೆಡು ಕಡೆ ಜಿಲ್ಲಾಧಿಕಾರಿಗಳು ಶಿಫಾರ್ಸು ಮಾಡದಿರಬಹುದು, ಅಂಥದ್ದು ಸರಕಾರದ ಗಮನಕ್ಕೆ ಬಂದಿಲ್ಲ. ಆದರೆ ಈ ವರ್ಷಮಾತ್ರ ಜಿಲ್ಲಾಧಿಕಾರಿಗಳು ಬಂದಿರುವ ಅರ್ಜಿಗಳಿಗೆ ಆದ್ಯತೆ

ಕೊಡಬೇಕೆಂದು ತಿಳಿಸಿದೆ. ಹಾಗೆ ಮಾಡಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಕಳಿಸಬಹುದು. ಎರಡನೆಯ ಪ್ರಶ್ನೆ ಕಂದಾಯದಮೇಲೆ ಒಂದಕ್ಕೆ ಮುನ್ನೂರು ಪಟ್ಟು ಬೆಲೆ ಕಟ್ಟುವುದು. ಈಗಿರುವ ರೆಗ್ಯುಲೇಷನ್ ಪ್ರಕಾರ ಕಂದಾಯದ ಮುನ್ನೂರು ಪಟ್ಟು ಅಥವಾ ಮಾರ್ಕೆಟ್ ವ್ಯಾಲ್ಯು ಎಂದಿದೆ. ಆದರೆ ಮಾರ್ಕೆಟ್ ವ್ಯಾಲ್ಯು ಗೊತ್ತುಮಾಡಬೇಕಾದರೆ ನಿಧಾನವಾಗುತ್ತದೆ. ಅಲ್ಲದೆ ಬಾವಿಗಳಿಗಾಗುವ ಖರ್ಚಿನಲ್ಲಿ ಅರ್ಧ ಭಾಗ ಹಣ ಬಾವಿ ಕಟ್ಟುವ ಕಡೆ ಕೊಡುವುದರಿಂದ ನಣ್ಣ ಹಿಡುವಳಿಯವರಿಗೆ ತೊಂದರೆಯಾಗುವುದಿಲ್ಲ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Distribution of Foodgrains

*Q.—204. Sri B. J. LINGE GOWDA (Channapatna).—

Will the Government be pleased to state :—

(*a*) the details of foodgrains distributed in the State during the months of September, October and November, 1965 (Districtwar information may be furnished) ;

(*b*) what was the quota allotted to Channapatna Taluk during the above three months ?

A.—Sri B. D. JATTI (Minister for Food).—

(*a*) *Vide* statement 'A' appended.

(*b*) *Vide* statement 'B' appended.